

> ನಾಳೆ ಎನ್ನುವುದು 365 ಪುಟಗಳ ಪುಸ್ತಕದಲ್ಲಿನ ಮೊದಲ ಖಾಲಿ ಹಾಳೆ. ಒಳ್ಳೆಯ ಸಂಗತಿಯಿಂದ ಬರವಣಿಗೆ ಆರಂಭಿಸಿ.
>
> -ಬ್ರಾಡ್ ಪೈಸ್ಲೆ

# ಶಾಲೆ–ಕಾಲೇಜುಗಳಲ್ಲಿ ಮಕ್ಕಳ ನಗು ಕೇಳಿಸಲಿ

**ಹೆಣ್ಣುಗಂಡೆಂಬ ತಾರತಮ್ಯ ಇಲ್ಲವಾಗಲಿ. 'ಅದು ಗಂಡಸರ ಕೆಲಸ, ಇದು ಹೆಂಗಸರ ಕೆಲಸ' ಎಂಬ ಮಾತುಗಳ ಬದಲು, 'ಮನೆಯ ಕೆಲಸ ಎಲ್ಲರ ಕೆಲಸ' ಎಂಬ ಭಾವನೆ ಹೊಸ ವರ್ಷದಲ್ಲಿ ಎಲ್ಲರಲ್ಲೂ ಮೂಡಲಿ.**





■ **ಬಿ.ಎಂ. ಭಾರತಿ ಹಾದಿಗೆ,**
ಉಪನ್ಯಾಸಕಿ-ಕಥೆಗಾರ್ತಿ


**2021**ನೇ ವರ್ಷ ಜಗತ್ತಿಗೆ ಸುಖ ಶಾಂತಿಗಳನ್ನು ಹೊತ್ತು ತರಲಿ. ಮಕ್ಕಳಿಲ್ಲದ ಶಾಲಾ ಕಾಲೇಜುಗಳನ್ನು ಕಲ್ಪಿಸಿಕೊಳ್ಳಲಾಗದು. 2021ರಲ್ಲಿ ಶಾಲಾ ಕಾಲೇಜುಗಳು ಮೊದಲಿನಂತೆ ಆರಂಭವಾಗಲಿ. ವಿದ್ಯಾರ್ಥಿಗಳು ಮುಕ್ತವಾಗಿ ವಿದ್ಯಾಭ್ಯಾಸ ಪಡೆಯುವಂತಾಗಲಿ. ಖಾಸಗಿ ಶಾಲೆ ಮತ್ತು ಕಾಲೇಜುಗಳಲ್ಲಿ ಕೆಲಸ ಮಾಡುವವರಿಗೆ ಉದ್ಯೋಗದ ಭದ್ರತೆ ಸಿಗುವಂತಾಗಲಿ.

'ಕೋವಿಡ್ 19'ರ ನಿಯಂತ್ರಣಕ್ಕೆ ಲಸಿಕೆ ನೀಡುವ ಸಿದ್ಧತೆ ಭರದಿಂದ ನಡೆಯುತ್ತಿದೆ. ಸಂತೋಷವೇ. ಆದರೆ ಅದು ಜನಸಾಮಾನ್ಯರನ್ನು ದುಡ್ಡುಕಾಸಿನ ಖರ್ಚಿಲ್ಲದೆ ತಲುಪುವಂತಾಗಬೇಕು. ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಇಲಾಖೆ ವಿಶೇಷವಾಗಿ ಸ್ಪಂದಿಸಬೇಕು. ಕೊರೊನಾ ಮಾತ್ರವಲ್ಲ, ಬೇರೆ ರೋಗ ಅಥವಾ ವೈರಸ್‌ಗಳು ದೇಶವನ್ನು ಪ್ರವೇಶಿಸಬಹುದು. ಅವುಗಳ ನಿಯಂತ್ರಣಕ್ಕಾಗಿ ಸರ್ಕಾರ ಸೂಕ್ತ ಏರ್ಪಾಡುಗಳನ್ನು ಕೈಗೊಳ್ಳಬೇಕು. ರೋಗ ನಿರೋಧಕ ಶಕ್ತಿ ಇರುವ ಆಹಾರಪದಾರ್ಥಗಳನ್ನು ಜನಸಾಮಾನ್ಯರಿಗೆ ಉಚಿತವಾಗಿ ನೀಡಬೇಕು.

ಕೊರೊನಾ ಇರಲಿ ಬಿಡಲಿ, ಮಾಸ್ಕ್ ಬಳಕೆ ಮತ್ತು ಸಾಮಾಜಿಕ ಅಂತರದ ಪಾಲನೆ 2021ರಲ್ಲೂ ಮುಂದುವರೆಯಬೇಕು. ಯುವಕ ಯುವತಿಯರು ತಮ್ಮ ಅಂತಸ್ತು–ಆಡಂಬರ, ಶಾಸ್ತ್ರ ಸಂಪ್ರದಾಯಗಳನ್ನು ಮೀರಿ 'ಮಂತ್ರ ಮಾಂಗಲ್ಯ' ಅನುಸರಿಸಿದ ಉದಾಹರಣೆಗಳು ಲಾಕ್‌ಡೌನ್ ಸಂದರ್ಭದಲ್ಲಿ ಸಾಕಷ್ಟಿವೆ. ಇಂತಹ ಮನಸ್ಸುಗಳು, ವಿವಾಹಗಳು ಹೆಚ್ಚಲಿ. ಸರಳವಾಗಿ ಬದುಕುವುದನ್ನು ಇಂದಿನ ಪೀಳಿಗೆ ಮೈಗೂಡಿಸಿಕೊಳ್ಳಬೇಕು.

ಲಾಕ್‌ಡೌನ್ ಸಮಯದಲ್ಲಿ ಕುಟುಂಬದ ಎಲ್ಲ ಸದಸ್ಯರು ಮನೆಯಲ್ಲೇ ಇದ್ದು ಪರಸ್ಪರ ಕಷ್ಟಸುಖ, ಕೆಲಸ ಕಾರ್ಯ ಹಂಚಿಕೊಂಡು ಸಾಮರಸ್ಯದಿಂದ ಬದುಕಿದ್ದನ್ನು ನಾವು ನೋಡಿದೆವು. ಇಂಥ ಸಮರಸದ ಬದುಕು 2021ರಲ್ಲೂ ಮುಂದುವರೆಯಲಿ, ನಿರಂತರವಾಗಿರಲಿ. ಹೆಣ್ಣುಗಂಡೆಂಬ ತಾರತಮ್ಯ ಇಲ್ಲವಾಗಲಿ. 'ಅದು ಗಂಡಸರ ಕೆಲಸ, ಇದು ಹೆಂಗಸರ ಕೆಲಸ' ಎಂಬ ಮಾತುಗಳ ಬದಲು, 'ಮನೆಯ ಕೆಲಸ ಎಲ್ಲರ ಕೆಲಸ' ಎಂಬ ಭಾವನೆ ಹೊಸ ವರ್ಷದಲ್ಲಿ ಎಲ್ಲರಲ್ಲೂ ಮೂಡಲಿ.

ಅತಿವೃಷ್ಟಿ ಇಲ್ಲವೇ ಅನಾವೃಷ್ಟಿ ಕರ್ನಾಟಕವನ್ನು ಕಾಡುತ್ತಲೇ ಇರುತ್ತದೆ. ಹೊಸ ವರ್ಷದಲ್ಲಾದರೂ ನೆಮ್ಮದಿ ಕಾಣಬಯಸುತ್ತೇನೆ. ಆಕಾಶ ನೋಡಿದಾಗ ಮೋಡವೇನಾದರೂ ಕಂಡರೆ ಹೆದರುವ ಪರಿಸ್ಥಿತಿಯಿದೆ. ಹಳ್ಳಿಗಳಿಗೆ ಕಾಡಾನೆಗಳು ಬರುತ್ತಿವೆ. ಮುಂದಾದರೂ ಈ ಸಮಸ್ಯೆಗಳಿಗೆ ಪರಿಹಾರ ದೊರಕಲಿ.

ನಾನು ಉಪನ್ಯಾಸಕಿ. ವಿದ್ಯಾರ್ಥಿಗಳಿಗೆ ವಿವೇಚನಾಶಕ್ತಿಯನ್ನು ರೂಢಿಸುವ ಕೆಲಸ ನನ್ನದು. ಮುಂಬರುವ ದಿನಗಳಲ್ಲಿ ಆತಂಕಗಳು ಎದುರಾದಲ್ಲಿ, ಅದನ್ನು ಧೈರ್ಯದಿಂದ ಎದುರಿಸಲು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ಸಜ್ಜುಗೊಳಿಸುವ ಕೆಲಸವನ್ನು 2021ರಲ್ಲಿ ಮಾಡಬೇಕೆಂದಿರುವೆ. ಆ ಶಕ್ತಿಯನ್ನು ಹೊಸ ವರ್ಷ ನನಗೆ ಕೊಡಲಿ. ಮುಖ್ಯವಾಗಿ, ಮಕ್ಕಳ ಶಿಕ್ಷಣಕ್ಕೆ 2021 ಹೆಚ್ಚು ಪೂರಕವಾಗಿರಲಿ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in